ಬಾಲಿವುಡ್

# ವೀಣಾ ಪರಿಣಯ



ವಿವಾದ ಪ್ರಿಯೆ ನಟಿ ವೀಣಾ ಮಲ್ಲಿಕ್ ಮತ್ತೆ ಸುದ್ದಿಯಲ್ಲಿದ್ದಾರೆ. ತಮ್ಮನ್ನು ಯಾರೂ ಕೇಳುತ್ತಿಲ್ಲ ಎಂಬ ಹತಾಶೆ ಉಂಟಾದಾಗ ವಿವಾದ ಸೃಷ್ಟಿಸಿ ಸುದ್ದಿಯಾಗುವುದು ಹೊಸತಲ್ಲ. ಆದರೆ ಈ ಬಾರಿಯ ಸುದ್ದಿ ಅವರು ಹುಟ್ಟುಹಾಕಿರುವುದಲ್ಲ. ಆಕೆಯ ಅಭಿಮಾನಿಗಳ ಪಾಲಿಗೆ ಸಿಹಿ ವರ್ತಮಾನವೂ ಅಲ್ಲ. ಇದು ವೀಣಾ ವಿವಾಹ ವಿಷಯ! ದುಬೈ ಮೂಲದ ಬಿಸಿನೆಸ್‌ಮ್ಯಾನ್ ಅಸದ್ ಬಶೀರ್‌ರನ್ನು ವೀಣಾ ವರಿಸಿದ್ದಾರೆ. ಸದ್ಯದಲ್ಲೇ ಅವರು ಅದ್ದೂರಿಯಾಗಿ ಈ ಸಂಭ್ರಮವನ್ನು ಬಂಧು ಮಿತ್ರರೊಂದಿಗೆ ಆಚರಿಸಿಕೊಳ್ಳಲಿದ್ದಾರೆ. ಬಶೀರ್‌ರ ತಂದೆ ಮತ್ತು ವೀಣಾರ ತಂದೆ ಆಪ್ತ ಸ್ನೇಹಿತರು. ಅವರಿಬ್ಬರೂ ಕೂಡಿ ಮಕ್ಕಳ ಮದುವೆ ನಿಶ್ಚಯಿಸಿದ್ದರಂತೆ. ಅಪ್ಪನ ಆಯ್ಕೆಯನ್ನು ವಿರೋಧಿಸದ ವೀಣಾ ತಿಂಗಳ ಹಿಂದೆಯೇ ಮದುವೆಗೆ ಒಪ್ಪಿಗೆ ಸೂಚಿಸಿದ್ದರಂತೆ. ಇದನ್ನು ವೀಣಾ ಮತ್ತು ಆಕೆಯ ತಂದೆ ಮಲ್ಲಿಕ್ ಮೊಹಮದ್ ಅಸ್ಲಾಂ ಖಚಿತಪಡಿಸಿದ್ದಾರೆ.

'ಬಿಗ್‌ಬಾಸ್ 4'ರ ಆವೃತ್ತಿಯಲ್ಲಿ ಪಾಲ್ಗೊಳ್ಳುವ ಸಲುವಾಗಿ ನೆರೆಯ ಪಾಕಿಸ್ತಾನದಿಂದ ಬಂದ ವೀಣಾ ಬಾಲಿವುಡ್‌ನಲ್ಲಿ ನೆಲೆ ಕಂಡವರು. ಬಿಗ್‌ಬಾಸ್‌ನಲ್ಲಿದ್ದಾಗಲೇ ಕಿತ್ತಾಟ, ಗುದ್ದಾಟಗಳಿಂದ ಸುದ್ದಿಯಲ್ಲಿರುತ್ತಿದ್ದ ವೀಣಾ, ಬಿಟೌನಿನ ಭಾಗವಾದ ಮೇಲಂತೂ ವಿವಾದವನ್ನು ಆಪ್ತಸಂಗಾತಿಯನ್ನಾಗಿಸಿಕೊಂಡವರು. ಒಂದೆರಡು ಪಾತ್ರಗಳಲ್ಲಿ, ಐಟಂ ಸಾಂಗ್‌ಗಳಲ್ಲಿ ಕುಣಿಯುವ ಅವಕಾಶ ಬಿಟ್ಟರೆ ಹೇಳಿಕೊಳ್ಳುವಂಥ ಸದ್ದೇನೂ ಅಭಿನಯ ಕ್ಷೇತ್ರದಲ್ಲಿ ವೀಣಾ ಮಾಡಿದವರಲ್ಲ. ಮೊನ್ನೆ ಮೊನ್ನೆ ಗಾಂಧಿನಗರದ ಮೆಟ್ಟಿಲನ್ನೂ ತುಳಿದು ಬಂದ ದಾರಿಗೆ ಸುಂಕವಿಲ್ಲವೆಂದು ಮರಳಿದ್ದಾಯಿತು. ಆದರೂ ವೀಣಾ ಜನಪ್ರಿಯತೆ ದೊಡ್ಡದು. ಬಿಗ್‌ಬಾಸ್ ಮನೆಯಲ್ಲಿಯೇ ನಟ ಅಶ್ಮಿತ್ ಪಟೇಲ್‌ಗೆ ಹತ್ತಿರವಾಗಿ ಗಾಸಿಪ್‌ಗಳ ಮೂಲವಾದರು. ಅಶ್ಮಿತ್ ಜೊತೆಗಿನ ವಿರಸದ ಕಾರಣ ಆತನಿಂದ ದೂರಾಗಿದ್ದ ವೀಣಾ ಮತ್ತೆ 'ಸೂಪರ್ ಮಾಡೆಲ್' ಚಿತ್ರದಲ್ಲಿ ತೆರೆ ಮೇಲೆ ಆತನೊಟ್ಟಿಗೆ ಬಣ್ಣ ಹಚ್ಚಿದ್ದಲ್ಲದೆ ತುಟಿಗೆ ತುಟಿ ಬೆಸೆದಿದ್ದರೂ ಸಿನಿಮಾ ಬಂದು ಹೋದದ್ದೇ ತಿಳಿಯಲಿಲ್ಲ. ಮಾತ್ರವಲ್ಲ ಪಾಕಿಸ್ತಾನಿ ಕ್ರಿಕೆಟರ್ ಮಹಮದ್ ಆಸಿಫ್ ಮತ್ತು ನಾರ್ವೆ ಮೂಲದ ವ್ಯಾಪಾರಿ ಶೇಕ್ ಉಮರ್ ಫರೂಕ್ ಜೊತೆಗೂ ವೀಣಾ ಸುತ್ತಾಟ ನಡೆಸಿದ್ದರು. ಎಫ್‌ಎಚ್‌ಎಮ್ ನಿಯತಕಾಲಿಕೆಯ ಮುಖಪುಟಕ್ಕೆ ಬೆತ್ತಲೆಯಾಗಿ ದೇಹವೊಡ್ಡಿ ವಿವಾದಕ್ಕೆ ಕಾರಣವಾಗಿದ್ದರು ವೀಣಾ. ಹೀಗೆ ಎಷ್ಟೇ ವಿವಾದ ಸೃಷ್ಟಿಸಿದ್ದರೂ ವೀಣಾರಿಗೆ ಇದ್ದ ಅಭಿಮಾನಿಗಳ ದಂಡು ಚಿಕ್ಕದೇನಲ್ಲ. ಈಗ ಆಕೆಯ ಮದುವೆಯ ಅನಿರೀಕ್ಷಿತ ಸುದ್ದಿ ಅವರಿಗೆ ಕಹಿ ನೀಡಿದೆ. ಏನೇ ಆಗಲಿ ಪುಷ್ಕಳ ಸುದ್ದಿ ನೀಡುತ್ತಿದ್ದ ವೀಣಾರ ಪರಿಣಯ ಪ್ರಸಂಗ ಗಾಸಿಪ್ ಪ್ರೇಮಿಗಳ ಪಾಲಿಗಂತೂ ದೊಡ್ಡ ನಷ್ಟ.

★ ಅಮಿ


